



## ಪುಸ್ತಕ ಓದಿರಿ, ಗಿಫ್ಟ್ ಪಡೆಯಿರಿ!

ಪ್ರಪಂಚದ ಎಲ್ಲ ಜ್ಞಾನವನ್ನು ನಾವು ಪುಸ್ತಕಗಳಿಂದ ಪಡೆಯಬಹುದು. ಓದು ಜೀವನದಲ್ಲಿ ಬಹುಮುಖ್ಯವಾದ ಪಾತ್ರವನ್ನು ವಹಿಸುತ್ತದೆ. ಈ ಕಾರಣ ಓದಿನ ಅಭಿರುಚಿಯನ್ನು ನಾವೆಲ್ಲ ತಪ್ಪದೇ ಬೆಳೆಸಿಕೊಳ್ಳಬೇಕು. ಇದರಂತೆ ಮಕ್ಕಳಲ್ಲಿ ಓದಿನ ಅಭಿರುಚಿಯನ್ನು ಬೆಳೆಸಲು ರಾಯಚೂರಿನ ಗಾಜಗಾರಪೇಟೆ ನಿವಾಸಿಯಾದ ರಂಗರಾವ್ ದೇಸಾಯಿ ಕಾಡ್ಲೂರು ಎಂಬುವವರು 'ಒಂದು ಗಂಟೆ ಓದಿರಿ, ಒಂದು ಗಿಫ್ಟ್ ಪಡೆಯಿರಿ' ಎಂಬ ವಿಭಿನ್ನ, ಆಕರ್ಷಕ ಚಟುವಟಿಕೆಯೊಂದನ್ನು ಮಾಡಿದ್ದಾರೆ.

ತಮ್ಮ ಮನೆಯಲ್ಲಿನ ಒಂದು ಕೋಣೆಯಲ್ಲಿ ನೂರಾರು ಕಿರು ಪುಸ್ತಕಗಳನ್ನು ತರಿಸಿದ್ದಾರೆ. ಇಲ್ಲಿರುವ ಯಾವುದೇ ಪುಸ್ತಕವನ್ನು ಒಂದು ಗಂಟೆಯೊಳಗೆ ಓದಿ ಮುಗಿಸಬಹುದು. 48 ರಿಂದ 50 ಪುಟಗಳನ್ನು ಈ ಪುಸ್ತಕಗಳು ಒಳಗೊಂಡಿವೆ. ಸ್ವಾತಂತ್ರ್ಯ ಹೋರಾಟಗಾರರ, ಸಮಾಜ ಸುಧಾರಕರ, ಸಾಹಿತಿಗಳ, ದೇಶ ಕಂಡ ಮಹಾನ್ ನಾಯಕರ, ವಿಜ್ಞಾನಿಗಳ... ಹೀಗೆ ವಿವಿಧ ಮಹನೀಯರಿಗೆ ಸಂಬಂಧಿಸಿದ ಪುಸ್ತಕಗಳು ಇಲ್ಲಿವೆ. ಇಲ್ಲಿ ಮಕ್ಕಳು ಮುಕ್ತವಾಗಿ ಬಂದು ಯಾವುದಾದರೂ ಒಂದು ಪುಸ್ತಕವನ್ನು ಸ್ವತಃ ತಾವೇ ತೆಗೆದುಕೊಂಡು ಓದಬಹುದು. ಈ ಗ್ರಂಥಾಲಯಕ್ಕೆ ಬಂದು ಒಂದು ಗಂಟೆ ಪುಸ್ತಕ ಓದಿದರೆ ಅವರಿಗೆ ಕುಡಿಯಲು ಕಾಫಿ, ಪೆನ್ನು, ಗಾಳಿಪಟ, ನೀರಿನ ಬಾಟಲಿ, ಆಟಿಕೆ ಸಾಮಗ್ರಿ... ಹೀಗೆ ಇನ್ನು ಮುಂತಾದ ಉಡುಗೊರೆಯನ್ನು ನೀಡಲಾಗುತ್ತದೆ.

ಈ ಚಟುವಟಿಕೆಯಿಂದಾಗಿ ಓದಿನತ್ತ ಮಕ್ಕಳು ಹೆಚ್ಚಿನ ಸಂಖ್ಯೆಯಲ್ಲಿ ಮುಖಮಾಡಿದ್ದಾರೆ. ಮಕ್ಕಳಲ್ಲಿ ಪುಸ್ತಕ ಓದುವ ಅಭಿರುಚಿಯನ್ನು, ಸಮಯ ಸದುಪಯೋಗಪಡಿಸಿಕೊಳ್ಳುವಲ್ಲಿ ಮತ್ತು ರಜಾ ದಿನಗಳಲ್ಲಿ ಜ್ಞಾನಾರ್ಜನೆ ಪಡೆಯಲು ಇದೊಂದು ಪ್ರೇರಣಾದಾಯಕವಾಗಿದೆ. ಡಾ.ಬಿ.ಆರ್. ಅಂಬೇಡ್ಕರ್, ಕುವೆಂಪು, ಗಾಂಧೀಜಿ, ಸರ್.ಎಂ. ವಿಶ್ವೇಶ್ವರಯ್ಯ, ಸುಭಾಷ್ ಚಂದ್ರ ಬೋಸ್, ಐನ್‌ಸ್ಟೈನ್, ಸಿ.ವಿ.ರಾಮನ್, ಇಮ್ಮಡಿ ಪುಲಕೇಶಿ, ಅಶೋಕ, ಸಂಗೊಳ್ಳಿ ರಾಯಣ್ಣ ಸೇರಿದಂತೆ ಇನ್ನು ಮುಂತಾದವರ ಪುಸ್ತಕಗಳು ಓದಲು ಇಲ್ಲಿ ಲಭ್ಯ.

—ಈರಣ್ಣ ಬೆಂಗಾಲಿ, ರಾಯಚೂರು

## ಮದುವೆ ಮನೆಯಲ್ಲಿ ಆಲೆಮನೆ

ಕೋಣಗಳಿಂದ ಗಾಣ ತಿರುಗಿಸಿ ಕಬ್ಬಿನ ಹಾಲು ತೆಗೆಯುವ ಸಾಂಪ್ರದಾಯಿಕ ಆಲೆಮನೆಗಳ ದೃಶ್ಯ ಈಗ ತೀರಾ ಅಪರೂಪ. ಕಬ್ಬನ್ನು ಅರೆಯಲು ವಿವಿಧ ನಮೂನೆಯ ಯಂತ್ರಗಳ ಬಳಕೆಯೇ ಈಗ ಹೆಚ್ಚು ಕಾಣುತ್ತವೆ. ಕೋಣ/ಎತ್ತುಗಳ ಜಾಗಕ್ಕೆ ವಿದ್ಯುತ್/ಡೀಸೆಲ್ ಮೋಟಾರ್‌ಗಳು ಬಂದು ಕುಳಿತಿವೆ. ಮಿರಿಮಿರಿ ಮಿಂಚುವ ಆಲೆಕೋಣಗಳನ್ನು ಕಣ್ತುಂಬಿಸಿಕೊಳ್ಳುತ್ತಾ, ಕಂಠಮಟ್ಟ ಕಬ್ಬಿನ ಹಾಲು ಕುಡಿಯುತ್ತಾ, ನೊರೆ ಬೆಲ್ಲ ಸವಿಯುವ ಆಲೆಮನೆಗಳ ಸೊಗಡು ಮರೆಯಾಗುತ್ತಿದೆ. ಪ್ರಾಣಿಗಳ ನಿರ್ವಹಣಾ ವೆಚ್ಚ ದುಬಾರಿಯಾಗುತ್ತಿರುವ ಇಂದಿನ ದಿನಗಳಲ್ಲಿ ಯಂತ್ರಗಳ ಬಳಕೆಯೇ ಕಡಿಮೆ ಖರ್ಚಿನದು ಎಂಬುದು ಬಹುತೇಕರ ಅಭಿಪ್ರಾಯವೂ ಆಗಿರಬಹುದು. ಹಾಗಾಗಿ ಎಲ್ಲೆಡೆ ಯಾಂತ್ರೀಕೃತ ಕಬ್ಬಿನ ಹಾಲಿನ ಕೇಂದ್ರಗಳು ಸಾಮಾನ್ಯ. ಮೊನ್ನೆ ಆತ್ಮೀಯರೊಬ್ಬರ ಮದುವೆ ಮನೆಯಲ್ಲಿ ಶಾಸ್ತ್ರೀಯ ಆಲೆಮನೆ ಕಂಡು ಮನವರಳಿತ್ತು! ತೀರ್ಥಹಳ್ಳಿಯ ವಾಸುದೇವ ವಿಜಯಲಕ್ಷ್ಮಿ ದಂಪತಿಗಳ ವೈವಾಹಿಕ ಆರತಕ್ಷತೆ ಸಮಾರಂಭದಲ್ಲಿ ಕೋಣಗಳು ಕಬ್ಬನ್ನು ಅರೆಯುತ್ತಾ ಬಂದ ಅತಿಥಿಗಳಿಗೆಲ್ಲಾ ತಾಜಾ ಕಬ್ಬಿನ ಹಾಲಿನ ಸತ್ಕಾರ ನೀಡಿದ್ದು ವಿಶೇಷವಾಗಿತ್ತು. ಅದರಲ್ಲೂ ಚಿಣ್ಣರ ಬೆರಗಿನ ನೋಟದಲ್ಲಿ ಆಲೆಕಣೆ ಕಳೆಗಟ್ಟಿತ್ತು!

—ಡಾ ಮುರಳೀಧರ ಕಿರಣಕೆರೆ, ಶಿವಮೊಗ್ಗ



## ಹಕ್ಕಿಗಳಂತೆ ಕಾಣುವ ಹೂವು!



ಚಾರ್ಮಾಡಿ ಮಡಿಲಲ್ಲಿ ಆಕಾಶದಿಂದ ಧರೆಗಿಳಿವ ಹಕ್ಕಿಗಳ ವರ್ಣಮಾಲೆಯಂತೆ ಕಾಣುವ ಈ ಹೂವು ನೋಡಿ ದಂಗಾದೆ. ಹಕ್ಕಿಗಳ ಚಿತ್ತಾರದಂತೆಯೂ ಇದು ಕಾಣುತ್ತದೆ. ಸರ ಮಾಲೆಯಂತೆ ಕಾಣುವ ಅಪರೂಪದ ಹೂ ಗೊಂಚಲು ನೋಡುತ್ತಾ ನಿಂತರೆ ಭಾವುಕರಾಗುವುದರಲ್ಲಿ ಸಂದೇಹವೇ ಇಲ್ಲ. ಇದು ಕಂಡದ್ದು ಬೆಳ್ತಂಗಡಿ ತಾಲ್ಲೂಕು ಚಾರ್ಮಾಡಿ ಸನಿಹದ ಮನೆಯೊಂದರ ಬೇಲಿ ಪಕ್ಕದಲ್ಲಿ. ಬಾಳೆ ಜಾತಿಗೆ ಸೇರಿದ 5–6 ಅಡಿ ಎತ್ತರದವರೆಗೆ ಬೆಳೆಯುವ ಸಸ್ಯ. ಇದನ್ನು ಸ್ಥಳೀಕರು ಬಾಳೆಹೂವು ಎಂಬುದಾಗಿ ಕರೆದರೂ ಅದು ಕಾಡು ಜಾತಿಯ ಬಾಳೆ ಕುಟುಂಬಕ್ಕೆ ಸೇರಿರಬಹುದಾದ ಗಿಡ. ಇದರ ವೈಜ್ಞಾನಿಕ ಹೆಸರು ಇತರೆ ವಿವರಗಳು ಅವರಲ್ಲಿ ಲಭ್ಯವಿಲ್ಲ. ಏನೇ ಇರಲಿ ನೋಡಲಂತೂ ಸುಂದರ!

—ರಾಮಕೃಷ್ಣ ಗೋಖಲೆ, ತಿಳವಳ್ಳಿ